ಬನವಾಸಿ ವೆಂಕಟೇಶ ದೀಕ್ಷಿತ್

# ಪೊದೆಯಲ್ಲೊಂದು ಹಕ್ಕಿ, ಹಳ್ಳದಲ್ಲೊಂದು ಮೀನು

ರೈಲು ಬರಲು ಇನ್ನೂ ಒಂದು ತಾಸಿತ್ತು. ಜನ ಒಬ್ಬಿಬ್ಬರು ಅಲ್ಲಿಲ್ಲಿ ಕುಳಿತಿದ್ದರು. ಹಳಿಯಾಚೆ ಎರಡನೇ ಪ್ಲಾಟ್‌ಫಾರ್ಮಿನಲ್ಲಿ ದಾವಣಗೆರೆಯಿಂದ ಈ ಕಡೆ ಯಾವುದೋ ರೈಲು ಬಿಟ್ಟ ಸೂಚನೆಯಾಗಿದ್ದಕ್ಕೆ ಪ್ರಯಾಣಿಕರು ಚಟುವಟಿಕೆಯಲ್ಲಿದ್ದರು. ಶಿಶಿರ ಋತುವಿನ ಉತ್ತರಾರ್ಧ. ಹಳಿಯಮೇಲೆ ಬಿಸಿಲು ಚುರುಕಾಗಿದ್ದರು ನೆರಳಲ್ಲಿ ಹಿತವಾಗಿತ್ತು. ಎಚ್ಚರಿಕೆಗೆ ಬ್ಯಾಗನ್ನು ಕಾಲುಗಳ ನಡುವೆ ಒತ್ತರಿಸಿಕೊಂಡು ಕುಳಿತ ರಾಮದೇವ ಹೆಗಡೆಯ ಮನಸು ಎಲ್ಲಿಂದೆಲ್ಲಿಗೆಲ್ಲ ಚಲಿಸುತ್ತ ದೇಹದ ಸಂಬಂಧ ಕಡಿದುಕೊಂಡಂತಿತ್ತು. 'ಜನಶತಾಬ್ದಿ ಇಲ್ಲೇ ಬರುವುದಲ್ವ?' ಪ್ರಶ್ನೆ ಬಂದಮೇಲೇ ಹೆಗಡೆಯವರಿಗೆ ಗೊತ್ತಾಗಿದ್ದು ಅವರ ಬೆಂಚಿನಮೇಲೆ ಇನ್ನೊಬ್ಬರು ಬಂದು ಕುಳಿತದ್ದು. 'ನಾನೂ ಅದ್ರಲ್ಲೇ ಹೋಗುವುದು' ಉತ್ತರಿಸುತ್ತ ಅವರತ್ತ ತಿರುಗಿದರು. ಬಿಳಿಯ ಬಣ್ಣ. ಕಿವಿಯ ಹತ್ತಿರ ಬಿಟ್ಟು ಉಳಿದೆಲ್ಲ ಬೋಳಾದ ತಲೆ. ಕಪ್ಪು ಪ್ಯಾಂಟಿನ ಮೇಲೆ ತೊಟ್ಟ ಚೌಕಳಿ ಅಂಗಿ ಸ್ಥೂಲ ಹೊಟ್ಟೆಯಮೇಲೆ ಏರಿಳಿದಿತ್ತು. 'ನಾನು ಅನಂತ ಕಾಮತ್. ಬೆಂಗಳೂರಿಗೆ ಹೊರಟಿದ್ದು' ಅಂತ ಪರಿಚಯ ಹೇಳಿದರು. ಇವರೂ ತಮ್ಮ ಪರಿಚಯ ಹೇಳಿದರು. ಕಾಮತರ ಪಕ್ಕ ದೊಡ್ಡ ಸೂಟುಕೇಸಿತ್ತು. ತೀರ ಇತ್ತೀಚೆಗೆ ವಿಮಾನದಲ್ಲಿ ಪಯಣಿಸಿದ್ದನ್ನು ಇನ್ನೂ ಅದರಿಂದ ನೇತುಬಿದ್ದ ಚೀಟಿ ಸಾರುತ್ತಿತ್ತು. ಅದನ್ನು ಗಮನಿಸಿದವರಂತೆ 'ಡೆಟ್ರಾಯ್ಟ್‌ನಲ್ಲಿ ನನ್ನ ಮಗ ಇರುವಲ್ಲಿಗೆ ಹೊಗತಿರ್ತೇವೆ. ತಿಂಗಳು ಎರಡು ತಿಂಗಳಿದ್ದು ಬರತೇವೆ. ಇಳಿ ವಯಸ್ಸು ಬಿದ್ದಮೇಲೆ ಮನಸ್ಸಿಗೆ ಮೊಮ್ಮಕ್ಕಳ ಮಾಯೆ ಜಾಸ್ತಿ ನೋಡಿ. ಹೆಂಡತಿ ಮುಂದಿನ ತಿಂಗಳು ಬರ್ತಾಳೆ' ನಕ್ಕರು. ಮಾಯೆಯೇನೋ ಸರಿ; ಸಂಭ್ರಮಿಸಬೇಕಾದ್ದೆ. ಗಾಯವೂ ಆಗತದಲ್ಲ ಬದುಕಲ್ಲಿ, ಆಗೇನು ಹೇಳೋಣ ಅನಿಸಿ ಅಂತರ್ಮುಖಿಯಾದರು ಹೆಗಡೆ. 'ಮುಂಬಯಿಗೆ ವಿಮಾನದಲ್ಲಿ ಬಂದೆ. ಮಾತುಂಗಾದಲ್ಲಿ ಸ್ವಂತದ ಹೋಟೆಲಿದೆ. ಹಾವೇರಿಯಲ್ಲಿ ಹೆಂಡತಿಯ ಅಣ್ಣನ ಬಿಸಿನೆಸ್ಸಿದೆ. ಅವರನ್ನ ನೋಡಿಕೊಂಡು ಈಗ ಬೆಂಗಳೂರಿಗೆ ಹೊರಟಿದ್ದು' ವಿವರಿಸುವಾಗಲೆ ಕಾಮತರು ಬ್ಯಾಗಿಂದ ಪ್ಯಾಕೆಟ್ ತೆಗೆದು ಉಪ್ಪುಹಾಕಿ ಹುರಿದ ಅಕ್ರೋಟ್ ಬೀಜ ಕೊಡುತ್ತ ಅಮೆರಿಕದ್ದು, ರುಚಿಯಿರತದೆ ಅಂದರು. ಸಲೀಸಾಗಿ ಮಾತಿಗೆಳೆಯುವ ರೀತಿಗೆ ಸಡಿಲಗೊಂಡರು ಹೆಗಡೆ. ಇಲಿನಾಯ್ಸನಲ್ಲಿ ನನ್ನ ಮಗಳಿರೋದು ಅನ್ನಹೊರಟವರಿಗೆ ಬೇಡವೆನಿಸಿತು. ಈಗ ಅವಳು ಅಲ್ಲಿದ್ದಾಳೋ ಮತ್ತೆಲ್ಲಿದ್ದಾಳೋ. ಮತ್ತೇನೊ ವಿಚಾರಿಸಬೇಕೆನ್ನುವುದರಲ್ಲಿ ರೈಲು ದೂರದಲ್ಲಿ ಕಪ್ಪು ಚುಕ್ಕೆಯಂತೆ ಅವತರಿಸಿತು. ತಟ್ಟನೆ ಅಲ್ಲೆಲ್ಲ ಜೀವತಳೆದ ಗದ್ದಲದಲ್ಲಿ ಒಂದಾದರು. ಬೋಗಿಯಲ್ಲೂ ಎದುರುಬದರು ಸೀಟುಗಳೇ ಸಿಕ್ಕಿದ್ದಕ್ಕೆ ಕೊಂಡಿ ಕಳಚಲಿಲ್ಲ. ದಾವಣಗೆರೆಯಲ್ಲಿ ಪೇಪರುಕಪ್ಪಿನಲ್ಲಿ ಚಹ ಕುಡಿಯುತ್ತಾ ಕಿಡಕಿಯಲ್ಲಿ ಹೊರಜಗತ್ತು ಹಿಂದಕ್ಕೋಡುವ ಮೋಡಿಯಲ್ಲಿ ಸಿಲುಕಿದವರಿಗೆ ಈ ಮಾತಿನ ಖಯಾಲಿ ಮನುಷ್ಯ